<u>ದಿ:04-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಂದುವರಿದ ಪಾಟಿಸವಾಲು : ವಾದಿ ಪರ ಶ್ರೀ. ಕೆ.ಎಸ್ ವಕೀಲರಿಂದ :</u>

6. 1982 ರ ಕ್ರಯ ಪತ್ರ ಆಗುವ ಸಂದರ್ಭದಲ್ಲಾಗಲೀ ಅಥವಾ 2002 ರ ಕ್ರಯ ಪತ್ರ ಆಗುವ ಸಂದರ್ಭದಲ್ಲಾಗಲೀ ಅಂಜನಪ್ಪ, ಚಿನ್ನಪ್ಪ, ಮುನಿನಂಜಪ್ಪ ಹಾಗೂ ಜಯರಾಮಪ್ಪ ಅವರ ಮಧ್ಯೆ ಏನಾದರೂ ಪಾಲು ವಿಭಾಗ ಆದ ಬಗ್ಗೆ ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಂಜೀವಪ್ಪ ಅವರ ಮಕ್ಕಳ ಮಧ್ಯೆ ಈ ದಾವೆ ಹಾಕುವವರೆಗೂ ಯಾವುದೇ ಪಾಲು ವಿಭಾಗ ಪತ್ರ ಆಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಂಜೀವಪ್ಪ ಅವರ ಉಳಿಕೆ ಆಸ್ತಿಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸಂಜೀವಪ್ಪ ಅವರ ಆಸ್ತಿಯ ಬಗ್ಗೆ ನನಗೆ ಗೊತ್ತಿದೆ ಎಂದ ಸಾಕ್ಷಿ ನುಡಿಯುತ್ತಾರೆ. ನನಗೆ ಗೊತ್ತಿರುವ ಆಸ್ತಿಗಳಲ್ಲಿ ಸಂಜೀವಪ್ಪ ಅವರ ಮಕ್ಕಳ ನಡುವೆ ವಿಭಾಗ ಪತ್ರ ಆಗಿದೆಯಾ ಎಂದು ನನಗೆ ಗೊತ್ತಿಲ್ಲ.

7. 1982 ರ ಕ್ರಯ ಪತ್ರ ಹಾಗೂ 2002 ರ ಕ್ರಯ ಪತ್ರದ ಬಗ್ಗೆ ನನಗೆ ವೈಯುಕ್ತಿಕ ಮಾಹಿತಿ ಇಲ್ಲ ಎಂದರೆ ಸಾಕ್ಷಿ ನನಗೆ 2002 ರ ಕ್ರಯ ಪತ್ರದ ಬಗ್ಗೆ ಮಾಹಿತಿ ಗೊತ್ತಿದೆ ಎಂದು ನುಡಿಯುತ್ತಾರೆ. 2002 ರಲ್ಲಿ ಆದ ಕ್ರಯ ಪತ್ರ ಅಥವಾ ಭೂ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇತ್ತಾ ಎಂದರೆ ಸಾಕ್ಷಿ ನನ್ನ ತಂದೆ ನನಗೆ ಹೇಳಿದ್ದಾರೆ ಎಂದು ನುಡಿಯುತ್ತಾರೆ. 2002 ನೇ ಇಸವಿಯಲ್ಲಿ ನಾನು 4 ನೇ ತರಗತಿ ಓದುತ್ತಿದ್ದೆ ಎಂದರೆ ಸರಿ. ನನ್ನ ತಂದೆ ನನಗೆ 2008-09 ನೇ ಇಸವಿಯಲ್ಲಿ ನನಗೆ ಈ ವ್ಯವಹಾರದ

ಬಗ್ಗೆ ಹೇಳಿದ್ದರು. 2008-09 ರ ಸಂದರ್ಭದಲ್ಲಿ ನನಗೆ ಈ ವ್ಯವಹಾರದ ಬಗ್ಗೆ ಗೊತ್ತಾದ ಸಮಯ ನಾನು ಸಂಜೀವಪ್ಪ ಅವರ ಮಕ್ಕಳ ನಡುವೆ ದಾವಾ ಆಸ್ತಿಯ ಬಗ್ಗೆ ಏನಾದರೂ ವ್ಯವಹಾರ ಆಗಿದೆಯಾ ಎಂದು ನನಗೆ ಗೊತ್ತಾಗಿತ್ತಾ ಎಂದರೆ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

8. ನಾನು ಯಾವ ಆಸ್ತಿಗಳು ಭೂಪರಿವರ್ತನೆ ಆಗಿದೆ ಎಂದು ಹೇಳುತ್ತಿದ್ದೇನೋ ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನಮ್ಮ ಆಸ್ತಿ ಭೂಪರಿವರ್ತನೆ ಆಗಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಇಂದಿನವರೆಗೂ ಪೋಡಿ ಸಹ ಆಗಿಲ್ಲ ಎಂದರೆ ಸಾಕ್ಷಿ ಭೂಪರಿವರ್ತನೆ ಮಾತ್ರ ಆಗಿಲ್ಲ ಎಂದು ನುಡಿಯುತ್ತಾರೆ. ನಾನು ಈ ಆಸ್ತಿಯ ಪೋಡಿಗೆ ಅರ್ಜಿ ಸಲ್ಲಿಸಿಲ್ಲ. ನಾವಾಗಲೀ ನಮ್ಮ ಆಸ್ತಿಯ ಮಾರಾಟಗಾರರಾಗಲೀ ಯಾವುದೇ ಕ್ರಯ ಪತ್ರಗಳಿಗೆ ಸಂಜೀವಪ್ಪ ಅವರ ಮಕ್ಕಳ ಸಹಿ ತೆಗೆದುಕೊಂಡಿಲ್ಲ ಎಂದರೆ ಸರಿ.

9. ನಾನು ದಾವಾ ಆಸ್ತಿಯ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ವಾದಿಗಳ ಪಿತ್ರಾರ್ಜಿತ ಆಸ್ತಿಯಾದ ಕಾರಣ ನಾವು ಸದರಿ ಆಸ್ತಿಯ ಸ್ವಾಧೀನದಲ್ಲಾಗಲೀ ಮತ್ತು ಸದರಿ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕಾಗಲೀ ಇಲ್ಲ ಎಂದರೆ ಸರಿಯಲ್ಲ. ನಮ್ಮ ಕ್ರಯ ಪತ್ರಕ್ಕೆ ಯಾವುದೇ ಕಾನೂನಿನ ಮಾನ್ಯತೆ ಇಲ್ಲದಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. 1982 ರ ಕ್ರಯ ಪತ್ರದಲ್ಲಾಗಲೀ ಅಥವಾ 2002 ರ ಕ್ರಯ ಪತ್ರದಲ್ಲಾಗಲೀ ವಾದಿಗಳು ಕ್ರಯ ಪತ್ರದ ಸಂದರ್ಭದಲ್ಲಿ ಅಪ್ರಾಪ್ತ ವಯಸ್ಕರಾದ್ದರೋ ಅಥವಾ ಪ್ರಾಪ್ತ ವಯಸ್ಕರಾಗಿದ್ದರೋ ಎಂಬ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸಾಕ್ಷಿ ಸದರಿ ಕ್ರಯ ಪತ್ರಗಳಲ್ಲಿ ಮಕ್ಕಳಿಗೂ ಹಾಗೂ ದಾವಾ ಆಸ್ತಿಗೂ ಯಾವುದೇ ಸಂಬಂಧ ಇಲ್ಲ ಎಂದು ಉಲ್ಲೇಖ ಆಗಿದೆ ಎಂದು ನುಡಿಯುತ್ತಾರೆ. ಆ ರೀತಿಯ ಯಾವುದೇ ರೀತಿಯ ಉಲ್ಲೇಖ 1982 ರ ಕ್ರಯ ಪತ್ರದಲ್ಲಿ ಇಲ್ಲ ಮತ್ತು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ನಿ.ಪಿ.16(ಎ)ಯ ದಾಖಲೆಯನ್ನು ತೋರಿಸಿ ಆ ರೀತಿಯ ಉಲ್ಲೇಖ ಎಲ್ಲಿದೆ ಎಂದು ಕೇಳಿದಾಗ ಸಾಕ್ಷಿ ಸದರಿ ದಾಖಲೆಯ 3 ನೇ ಪುಟದಲ್ಲಿ 9 ನೇ ಗೆರೆಯಲ್ಲಿ "ಸದರಿ ಸ್ವತ್ತಿನ ಮೇಲೆ ನಮಗೆ ಆಗಲೀ ಅಥವಾ ನಮ್ಮ ವಾರಿಸುದಾರರಿಗಾಗಲೀ ಯಾವುದೇ ರೀತಿಯ ಹಕ್ಕು ಬಾಧ್ಯತೆ ಇರುವುದಿಲ್ಲ" ಎಂದು ಉಲ್ಲೇಖ ಇರುವುದನ್ನು ಸಾಕ್ಷಿ ತೋರಿಸುತ್ತಾರೆ. ಮೈನರ್ ಮಕ್ಕಳ ಹಿತಾಸಕ್ತಿಯನ್ನು ಕಾಪಾಡುವ ಬಗ್ಗೆ ನಿ.ಪಿ.16(ಎ)ಯಲ್ಲಿ ಉಲ್ಲೇಖ ಇಲ್ಲ ಎಂದರೆ ಸರಿ.

11. 1982 ರಿಂದ 2015 ರವರೆಗೆ ನಾವಾಗಲೀ ನನ್ನ ತಂದೆಯಾಗಲೀ ಅಥವಾ ನನ್ನ ತಂದೆಯ ಮಾರಾಟಗಾರರಾಗಲೀ ಕ್ರಯ ಪತ್ರ ಮಾಡಿಕೊಂಡಿದ್ದೇವೆ ಎಂದು ವಾದಿಗಳಿಗೆ ನೋಟೀಸು ನೀಡಿಲ್ಲ.

<u>ಮರು ವಿಚಾರಣೆಃ</u> ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

(ಪ್ರಶಾಂತಿ.ಜಿ)
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**